# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ವಾಡ್ ಸಂಖ್ಯೆ.63, ಜಯಮಹಲ್
## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ದಿನಾಂಕ: 21.05.2022 ರಂದು ಶನಿವಾರ ಮಧ್ಯಾಹ್ನ 3.00 ಗಂಟೆಗೆ ಸಹಾಯಕ ಆಯುಕ್ತರು(ಆಡಳಿತ-1) ಹಾಗೂ ನೋಡಲ್ ಅಧಿಕಾರಿಗಳು ವಾರ್ಡ್ ಸಂಖ್ಯೆ63 ಬಿ.ಬಿ.ಎಂ.ಪಿ. ರವರ ಅಧ್ಯಕ್ಷತೆಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನಡೆಸಲಾಯಿತು. ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು ಹಾಗೂ ಸಮಿತಿಯ ಸದಸ್ಯರುಗಳು,

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1 | ಶ್ರೀಮತಿ ಖಾಜಿ ನಫೀಜಾ | ನೋಡಲ್ ಅಧಿಕಾರಿಗಳು |
| 2 | ಶ್ರೀ. ಮೊಹಮ್ಮದ್ ಜಾವೀದ್ ಎ.ಎಸ್ | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬಿ.ಬಿ.ಎಂ.ಪಿ) |
| 3 | ಶ್ರೀ. ಚಿಕ್ಕಗೂಳಿಗೌಡ | ಸಹಾಯಕ ಅಭಿಯಂತರರು |
| 4 | ಕಿಯೋನಿಕ್ಸ್ | ಸಹಾಯಕ ಅಭಿಯಂತರರು |
| 5 | ಮಹೇಶ್ | ಸಹಾಯಕ ಅಭಿಯಂತರರು ( ಬಿ.ಡಬ್ಲ್ಯೂಎಸ್.ಎಸ್.ಬಿ) |
| 6 | ಪ್ರಶಾಂತ್ ನಾಯಕ್ ಆರ್.ಕೆ | ಕಿರಿಯ ಆರೋಗ್ಯ ಪರಿವೀಕ್ಷಕರು |
| | | **ಗೈರು ಹಾಜರಿ** |
| 1 | ಆರೋಗ್ಯ ವೈದ್ಯಾಧಿಕಾರಿಗಳು | ಧನ್ಯಕುಮಾರ್ |
| 2 | ತೋಟಗಾರಿಕೆ ಅಧೀಕ್ಷಕರು | ಸುಧೀಂದ್ರ |
| 3 | ಸಹಾಯಕ ಕಂದಾಯ ಅಧಿಕಾರಿಗಳು | ವೀಣಾ |

1. ದಿನಾಂಕ:-07.05.2022 ರಂದು ವಾರ್ಡ್ ನಂ.63 ಸಭೆಗೆ ಗೈರು ಹಾಜರಾಗಿರುವ ಬಿ.ಬಿ.ಎಂ.ಪಿ ಅಧಿಕಾರಿ/ನೌಕರರುಗಳಿಗೆ ಹಲವು ಬಾರಿ ಕಾರಣ ಕೇಳಿ ನೋಟೀಸ್ ಜಾರಿ ಮಾಡಿಲಾಗಿದ್ದು, ಸದರಿ ಅಧಿಕಾರಿಗಳು/ನೌಕರರುಗಳು ಕಾರಣ ಕೇಳಿ ನೋಟಿಸ್‌ಗೆ ಸಮಜಾಷಿಸಿ ನೀಡಿರುವುದಿಲ್ಲ. ಇದರ ಬಗ್ಗೆ ವರದಿ ಮಾಡಿ ಮುಖ್ಯ ಕಛೇರಿಗೆ ಸಲ್ಲಿಸಲು ಮತ್ತು ಪ್ರತಿಯನ್ನು ನೋಡಲ್ ಅಧಿಕಾರಿಯವರಿಗೆ ಕಳುಹಿಸಲು ಹಾಗೂ ದಿನಾಂಕ: 21.05.2022 ರಂದು ನಡೆದ ಸಭೆಗೆ ಗೈರು ಹಾಜರಾದ ಅಧಿಕಾರಿ/ ನೌಕರರುಗಳಿಗೆ 3ನೇ ಕಾರಣ ಕೇಳಿ ನೋಟಿಸ್ ಜಾರಿ ಮಾಡಲು ಸಹಾಯಕ ಅಭಿಯಂತರರಿಗೆ ಸೂಚಿಸಿದರು.
2. ಪ್ರಶಾಂತ ನಾಯಕ್ ಆರ್.ಕೆ ಕಿರಿಯ ಆರೋಗ್ಯ ಪರಿವೀಕ್ಷಕರು ಪೌರ ಕಾರ್ಮಿಕರ ವಿವರಗಳನ್ನು ದಿನಾಂಕ: 21.05.2022ರ ಸಭೆಯಲ್ಲಿ ಸಲ್ಲಿಸಿದರು ಹಾಗೂ ವಾಹನಗಳು ಮತ್ತು ಚಾಲಕರ ವಿವರಗಳನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಿಸಿದರು.
3. ಪೌರ ಕಾರ್ಮಿಕರು ಸಾಕಷ್ಟು ಪ್ರಮಾಣದಲ್ಲಿ ಇರುವುದಿಲ್ಲವೆಂದು CIJMA NGO ಗುಂಪಿನವರು ದೂರು ನೀಡಿರುತ್ತಾರೆ ಆದ್ದರಿಂದ ಎಲ್ಲಾ ವಾರ್ಡ್‌ಗಳ ಪೌರ ಕಾರ್ಮಿಕರ ವರದಿಗಳನ್ನು( ಅಂಕಿಅಂಶಗಳು ಮಾತ್ರ ರಸ್ತೆಯ ಅಳತೆ, ಪೌರ ಕಾರ್ಮಿಕರ ಸಂಖ್ಯೆ, ಬ್ಲಾಕ್‌ಗಳ ಸಂಖ್ಯೆ ಇತ್ಯಾದಿ) ನೀಡಲು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಸೂಚಿಸಲಾಗಿದೆ ಇದರಿಂದ ಪೌರಕಾರ್ಮಿಕರ ಕೊರತೆಯನ್ನು ನಿರ್ಣಯಿಸುತ್ತೆವೆಂದು ತಿಳಿಸಿದರು.

4. CIJMA NGO ಗುಂಪಿನ ಪ್ರತಿನಿಧಿಗಳು ನೇತಾಡು ಮರದ ಕೊಂಬೆಗಳ ಬಗ್ಗೆ ದೂರು ನೀಡಿದ್ದು, ಇದರ ಬಗ್ಗೆ ಉತ್ತರ ನೀಡಲು ಅರಣ್ಯ ಇಲಾಕೆಯ ತಿಮ್ಮಪ್ಪ ರವರು ಸಭೆಗೆ ಹಾಜರಾಗಿರುವುದಿಲ್ಲ ಹಾಗೂ ಮುಂದಿನ ಸಭೆಗೆ ತಪ್ಪದೇ ಹಾಜರಾಗಲು ಸೂಚಿಸಿದರು.
5. ಯಾವುದೇ ಲಿಖಿತ ದೂರುಗಳು ಸ್ವೀಕರಿಸಿರುವುದಿಲ್ಲ, ಸಹಾಯ 2.0 ಆಪ್‌ನ ದೂರುಗಳನ್ನು ಪರಿಶೀಲಿಸಲಾಗಿದೆ.
6. ದಿನಾಂಕ:-07.05.2022ರ ಸಭೆಯಲ್ಲಿ ಕೋವಿಡ್ ಸಂಬಂಧಿಸಿದ ಮಾಹಿತಿಯನ್ನು ಆರೋಗ್ಯ ವೈದ್ಯಾಧಿಕಾರಿಗಳು ಶ್ರೀ ಧನ್ಯ ಕುಮಾರ್ ರವರಿಗೆ ದಿನಾಂಕ: 21.05.2022 ರ ಸಭೆಯಲ್ಲಿ ಸಲ್ಲಿಸಲು ಸೂಚಿಸಲಾಗಿತ್ತು ಆದರೆ ಸದರಿಯವರು ಸಭೆಗೆ ಪುನಃ ಗೈರು ಹಾಜರಾಗಿರುತ್ತಾರೆ.
7. ಶ್ರೀ ಸುಧೀಂದ್ರ, ತೋಟಗಾರಿಕೆ ಅಧೀಕ್ಷಕ ರವರಿಗೆ ಪ್ರಸ್ತುತ ಪ್ರಗತಿಯಲ್ಲಿರುವ ಯೋಜನೆಗಳ ಮಾಹಿತಿಯನ್ನು ದಿನಾಂಕ-21.05.2022ರ ಸಭೆಯಲ್ಲಿ ಸಲ್ಲಿಸಲು ಸೂಚಿಸಿದರು ಆದರೆ ಸದರಿಯವರು ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.
8. ಸಹಾಕಯ ಕಾರ್ಯನಿರ್ವಾಹಕ ಅಭಿಯಂತರ (ವಸಂತನಗರ ಉಪವಿಭಾಗ) ರವರು 15 ಕಟ್ಟಡಗಳಿಗೆ ನಕ್ಷೆ ಮಂಜೂರಾಗಿರುವ ಮತ್ತು 12 ಕಟ್ಟಡಗಳಿಗೆ 248(1)(2)ರ ನೋಟೀಸ್ ಹಾಗೂ 11 ಕಟ್ಟಡಗಳಿಗೆ 248(3)ರ ನೋಟೀಸ್ ನೀಡಿರುವ ಮಾಹಿತಿಯನ್ನು ಸಲ್ಲಿಸಿರುತ್ತಾರೆ. ಒಟ್ಟು ನಕ್ಷೆ ಅನುಮೋದೆ, ನೀಡುರುವ ಸಂಖ್ಯೆ, ಉಲ್ಲಂಘನೆಯಾಗಿರುವ ಪ್ರಕರಣಗಳ ಸಂಖ್ಯೆ ಮತ್ತು ಒಟ್ಟು ಕಟ್ಟಡಗಳು ಕೆಡವಿರುವ ಸಂಖ್ಯೆಗಳ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದರು ಹಾಗೂ ಸದರಿ ಮಾಹಿತಿಯನ್ನು ನೋಂದಣಿ ಪುಸ್ತಕ ಹಾಗೂ ಕಡತದ ಜೊತೆಗೆ ಪರಿಶೀಲಿಸಲಾಗುವುದು ಎಂದು ತಿಳಿಸಿದರು.
9. e-office ಪ್ರಾರಂಭಿಸದೇ ಇದ್ದರೆ, ಇದರ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಕೇಂದ್ರ ಕಛೇರಿಯ ಐ.ಟಿ ವಿಭಾಗದಿಂದ ಮಾಹಿತಿಯನ್ನು ಪಡೆದುಕೊಂಡು ತಕ್ಷಣ e-office ಪ್ರಾರಂಭಿಸಲು ಹಾಗೂ e-office ಬಾಕಿ ಪಟ್ಟಿಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸಲು ಸೂಚಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯ ಮಾಡಲಾಯಿತು.

ಸದಸ್ಯ ಕಾರ್ಯದರ್ಶಿಗಳು
ವಾರ್ಡ್ ನಂ. 63 ಜಯಮಹಲ್

S/d
ಮಾನ್ಯ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 63 ಜಯಮಹಲ್